ಕ್ರಮ ಸಂಖ್ಯೆ	ಪ್ರದೇಶ	ಬೂತ್‌ಗಳ ಸಂಖ್ಯೆ
41.	ವಿ.ವಿ.ಪುರಂ	02
42.	ಗಾಂದಿ ಬಜಾರ್	01
43.	ಹನುಮಂತನಗರ	03
44.	ಬಸವನಗುಡಿ	01
45.	ಎನ್.ಆರ್.ಕಾಲೋನಿ	02
46.	ತ್ಯಾಗರಾಜನಗರ	01
47.	ಬನಶಂಕರಿ	05
48.	ಆರ್.ಟಿ.ನಗರ	02
49.	ಹೆಚ್.ಎಂ.ಟಿ.ಕಾಲೋನಿ	01
50.	ಎಸ್.ಬಿ.ಎಂ. ಕಾಲೋನಿ	01
51.	ಗೆದ್ದಲಹಳ್ಳಿ	02
52.	ಯಲಹಂಕ	02
53.	ಹೆನ್ನೂರು ಬಾನಸವಾಡಿ	03
54.	ಓ.ಎಂ.ಬಿ.ಆರ್. ಲೇ ಔಟ್	01
	ಒಟ್ಟು	134

ವಿಷಯ:- ಬೆಂಗಳೂರಿನಲ್ಲಿ ಆಧುನಿಕ ಕಲೆಯ ರಾಷ್ಟ್ರೀಯ ಗ್ಯಾಲರಿ.

150(78)

ಶ್ರೀ ರಾಮಲಿಂಗಾರೆಡ್ಡಿ (ಜಯನಗರ):- ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ಕೇಂದ್ರ ಸರ್ಕಾರವು ಬೆಂಗಳೂರಿನಲ್ಲಿ ಆಧುನಿಕ ಕಲೆಯ ರಾಷ್ಟ್ರೀಯ ಗ್ಯಾಲರಿಯನ್ನು ತೆರೆಯಲು ಮಂಜೂರಾತಿ ನೀಡಿದೆಯೇ;

ಆ) ಹಾಗಿದ್ದಲ್ಲಿ, ಯಾವ ಕಟ್ಟಡದಲ್ಲಿ ಈ ಉದ್ದೇಶಿತ ಆಧುನಿಕ ಕಲೆಯ ರಾಷ್ಟ್ರೀಯ ಗ್ಯಾಲರಿಯನ್ನು ಪ್ರಾರಂಭಿಸಲಾಗುವುದು?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು):-

ಅ) ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿಗಳ ಮಂತ್ರಾಲಯವನ್ನು ಬೆಂಗಳೂರಿನಲ್ಲಿ ರಾಷ್ಟ್ರೀಯ ಆಧುನಿಕ ಕಲಾ ಗ್ಯಾಲರಿಯ ಶಾಖೆಯನ್ನು ತೆರೆಯಲು ಉದ್ದೇಶಿಸಿರುವುದಾಗಿ ತಿಳಿಸಿ ಸೂಕ್ತ ಕಟ್ಟಡವನ್ನು ಜಾಗವನ್ನು ಒದಗಿಸಲು ರಾಜ್ಯ ಸರ್ಕಾರವನ್ನು ಕೋರಿದೆ. ಇದಕ್ಕಾಗಿ ರಾಜ್ಯ ಸರ್ಕಾರದ ಮಾಣಿಕ್ಯವೇಲು ಕಾಂಪ್ಲೆಕ್ಸ್ ಕಟ್ಟಡವನ್ನು ಒದಗಿಸಲು ಗುರುತಿಸಿದ್ದು ಮುಂದಿನ ಕ್ರಮವನ್ನು ಕೈಗೊಳ್ಳಲಾಗುತ್ತಿದೆ.

ವಿಷಯ:- ಪ್ರವಾಸೋದ್ಯಮ ಅಭಿವೃದ್ಧಿ ನಿಗಮದಿಂದ ಬೆಂಗಳೂರಿನಲ್ಲಿ ಸಂಚಾರಿ ಉಪಹಾರ ಘಟಕಗಳನ್ನು ಪ್ರಾರಂಭ.

151(334)

ಶ್ರೀ ರಾಮಲಿಂಗಾರೆಡ್ಡಿ (ಜಯನಗರ):- ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು ಬೆಂಗಳೂರಿನಲ್ಲಿ ಸಂಚಾರಿ ಉಪಹಾರ ಘಟಕಗಳನ್ನು ಪ್ರಾರಂಭಿಸಲು ಉದ್ದೇಶಿಸಿದೆಯೇ;

ಆ) ಹಾಗಿದ್ದಲ್ಲಿ, ಈ ಉದ್ದೇಶಿತ ಸಂಚಾರಿ ಉಪಹಾರ ಘಟಕವು ಯಾವ ಯಾವ ಜಾಗಗಳಲ್ಲಿ ಸಂಚರಿಸುವುದು;

ಇ) ಎಷ್ಟು ಸಂಚಾರಿ ಉಪಹಾರ ಘಟಕಗಳನ್ನು ಪ್ರಾರಂಭಿಸಲಾಗುವುದು;

ಈ) ಇದಕ್ಕೆ ತಗಲುವ ವೆಚ್ಚವೆಷ್ಟು;

ಉ) ಯಾವಾಗ ಈ ಉದ್ದೇಶಿತ ಸಂಚಾರಿ ಉಪಹಾರ ಘಟಕಗಳು ಪ್ರಾರಂಭಗೊಳ್ಳುತ್ತವೆ?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಸಚಿವರು):-

ಅ) ನಗರದ ಪ್ರವಾಸೀ ತಾಣಗಳ ಬಳಿಯಲ್ಲಿ ಪ್ರವಾಸಿಗರು ಆದೇಶಿಸುವ ಉತ್ತಮ ಗುಣಮಟ್ಟದ ಕಡಿಮೆ ದರದ ತಿಂಡಿ ತಿನಿಸು ಹಾಗೂ ತಂಪು ಪಾನೀಯಗಳನ್ನು ಒದಗಿಸುವ ಕಾರ್ಯಕ್ರಮದ ಅಡಿಯಲ್ಲಿ ನಿಗಮವು ಬೆಂಗಳೂರು ಸಂಚಾರಿ ಉಪಹಾರ ಗೃಹ (EAT HOT ON WHEELS) ಸೌಲಭ್ಯವನ್ನು ಪ್ರಾರಂಭಿಸಲು ಉದ್ದೇಶಿಸಿದೆ.

ಆ) ಇದನ್ನು ಇನ್ನೂ ಅಂತಿಮಗೊಳಿಸಿಲ್ಲ.

ಇ) ಪ್ರಾಯೋಗಿಕವಾಗಿ ಪ್ರಾರಂಭದಲ್ಲಿ ಎರಡು ಸಂಚಾರಿ ಉಪಹಾರ ಗೃಹಗಳನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ.

ಈ) ಇದಕ್ಕೆ ಸುಮಾರು 10.00 ಲಕ್ಷ ರೂ.ಗಳ ವೆಚ್ಚ ತಗಲುವ ನೀರಿಕ್ಷೆ ಇದೆ.